ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 28th March 1972

The House met in the Assembly Chamber, Vidhana Soudha, Bangalore at One of the Clock.

MADAM SPEAKER (SMT K. S. NAGARATHNAMMA) in the Chair.

OBITUARY REFERENCES *Re* : DEMISE OF SRIYUTHS : A. KRISHNA SHETTY AND ATADA PONNIAH.

MADAM SPEAKER.—I regret to make a reference to the sad demise of Sri A. Krishna Shetty a former member of this House. Sri Krishna Shetty was a member of the Legislative Assembly between 1962- 67. He was a veteran member of the C. P. M. He passed away at 9-30 A.M. on 27th March 1972.

I also wish to make a reference to the sad demise of Sri Atada Ponniah, Ex-Member of Representative Assembly on 17th March 1972.

I request the Hon. Members to stand in silence for two minutes as a mark of respect to the deceased.

(*The members stood in silence for two minutes*).

MADAM SPEAKER.—I will convey the feelings of the House to the members of the bereaved families.

Papers Laid on the Table of the House.

Sri AZEEZ SAIT (Minister for Labour, Transport, Tourism and Wakfs): I beg to lay :

"The Accounts and Audit Report of the Mysore State Road Transport Corporation for the year 1969-70 as required under Section 33(4) of the Road Transport Corporation Act 1950) (Central Act 64 of 1950)".

MADAM SPEAKER:—Papers are laid.

Sri AZEEZ SAIT (Minister for Labour, Transport Tourism and Wakfs) : On behalf of the Finance Minister, I beg to lay:

"The Finance Accounts, 1969-70, the Appropriation Accounts 1969-70 and Audit Report (Civil and Commercial) for the year 1969-70 of the Government of Mysore as required by Article 151 (2) of the Constitution of India"

MADAM SPEAKER.—The Papers are laid. Now discussion on Budget to continue.

BUDGET ESTIMATES

(I) Demands for Grants for 1972—73 (Vote on Account)

(ii) Supplementary and Additional Demands for Grants for 1971-72.—*Debate Continued*

†ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸನ್ಮಾನ್ಯ ಅಧ್ಯಕ್ಷರೇ, 1972-73ನೆಯ ವರ್ಷದ ತಾತ್ಕಾಲಿಕ ಅಂದಾಜಿನ ಪಟ್ಟಿಯನ್ನು ಈ ಸಭೆಯ ಪರಿಶೀಲನೆಗೆ ತೆಗೆದುಕೊಳ್ಳತಕ್ಕ ಸಮಯದಲ್ಲಿ ಹಣಕಾಸಿನ ಮಂತ್ರಿಗಳು ಮಾಡಿರತಕ್ಕ ಗಂಭೀರವಾದ ಭಾಷಣದ ಅವರ ಭಾಷೆ ಏನಿದೆ ಅದನ್ನು ನೋಡಿದರೆ ನಾವು ಭಾರತದಲ್ಲಿ ಬದುಕತಕ್ಕ ಒಂದು ಸನ್ನಿವೇಶವೇ ಇಲ್ಲ. ಕಾರಣವಾದರೂ ಇಷ್ಟೇ, ಅವರ ಭಾಷಣದಲ್ಲಿ ಬಹುಶಃ ಎಲ್ಲ ರಾಜ್ಯಗಳಲ್ಲೂ ಏಕ ಪಕ್ಷೀಯವಾದ ಸರಕಾರವೇ ಸಂಪೂರ್ಣವಾಗಿರುವುದು ಒಳ್ಳೆಯದು ಎಂದು, ನಮ್ಮ ಮಂತ್ರಿಗಳೂ ಕೂಡ ಏಕ ಪಕ್ಷದ ಪ್ರಭುತ್ವ ನೆಲಸಬೇಕು ಎಂದು ಪ್ರಾರಂಭದಲ್ಲೇ ಮಾತನಾಡಿದ್ದಾರೆ, ತಮ್ಮ ಮುಖೇನ ಈ ಸಭೆಗೆ ಒಂದು ಅಂಶ ತಿಳಿಸಬೇಕಾಗಿದೆ, ಭಾರತದ ಸಂವಿಧಾನದಲ್ಲಿ ಬಹುಶಃ ಈ ರೀತಿ ಹೇಳಿಲ್ಲ. ನಮ್ಮದು ಫೆಡರಲ್ ಸ್ವರೂಪ ಎಂಬುದಾಗಿ ಇಟ್ಟುಕೊಂಡು ಇರುವುದರಿಂದ ಈ ರೀತಿ ಈಗ ಹೇಳಿದರೆ ಇದು ಸಂವಿಧಾನಕ್ಕೆ ಅಪಚಾರವೆಸಗಿದಂತಾಗುವುದಿಲ್ಲವೇ ? ಇದರ ಮೇಲೆ ಎಲ್ಲ ರಾಜ್ಯಗಳಲ್ಲೂ ಹಾಲಿ ಇರತಕ್ಕ ಕೇಂದ್ರ ಸರಕಾರದಂತೆ ಇರುವ ಪಕ್ಷವೇ ರಾಜ್ಯಗಳಲ್ಲೂ ಇದ್ದರೆ ದೇಶದ ಒಂದು ಆರ್ಥಿಕ ನುವ್ಯಸ್ಥೆಗೆ ಸಹಾಯವಾಗುತ್ತದೆ ಎಂದು ತಿಳಿಸಿದರು. ಇದರ ಬಗ್ಗೆ ನಾನು ಅವರನ್ನು ಪ್ರಶ್ನೆ ಮಾಡಬೇಕಾಗಿದೆ. ಬಹುಶಃ ಇಂದು ಇರುವ ಅಡಳಿತ ಪಕ್ಷದ ಸರಕಾರ ಇಲ್ಲದೇ ಇದ್ದರೆ ಆರ್ಥಿಕ ನುವ್ಯವಸ್ಥೆ ಸಾಧ್ಯವಾಗುತ್ತಿರಲಿಲ್ಲವೇ ? ನಮ್ಮ ಆರ್ಥಿಕ ಮಂತ್ರಿಗಳು ಪ್ರಮಾಣ ವಚನ ಸ್ವೀಕಾರ ಮಾಡಿದ ಕಾಲದಲ್ಲಿ ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. ಬಹುಶಃ ಇದರ ಹಿನ್ನೆಲೆ ಆಗ ಇರಲಿಲ್ಲವೇ ? ಮತ್ತು ಸಂವಿಧಾನಕ್ಕೆ ಅಪಚಾರ ಮಾಡಿದ ಧಾಟಿಯಲ್ಲಿ ಇಂದು ಅವರು ಮಾಡಿರುವ ಭಾಷಣದಲ್ಲಿ ಕಂಡುಬರುತ್ತದೆ. ಇಲ್ಲಿರುವ ಪ್ಯಾರಾ ಎರಡನ್ನು ನಾವು ಓದಿದರೆ ಅದು ಗೊತ್ತಾಗುತದೆ. ನಾನು ಅದನ್ನು ಪುನಃ ಇಲ್ಲಿ ಮತ್ತೆ ಓದುವ ಗೋಜಿಗೆ ಹೋಗುವುದಿಲ್ಲ. ಬಹುಶಃ ಅಡಳಿತದಲ್ಲಿ ಕೇಂದ್ರ ಸರಕಾರದ ಜೋ ಹುಕುಂ ಸರಕಾರ ರಾಜ್ಯಗಳಲ್ಲೂ ಇರಬೇಕೆಂದು ಅಪೇಕ್ಷಿಸಿದ್ದಾರೆ. ಅದನ್ನು ಪ್ರಧಾನ ಮಂತ್ರಿಗಳೂ ಚುನಾವಣಾ ಕಾಲದಲ್ಲಿ ಅಲ್ಲಲ್ಲಿ ಹೇಳಿದ್ದಾರೆ. A stable and strong Government is necessary to implement all our radical programmes. ಎಂದು ಅವರು ಹೇಳಿದಂತೆ ಎಲ್ಲ ರಾಜ್ಯಗಳಲ್ಲೂ ಏಕ ಪಕ್ಷದ ಅಧಿಕಾರ ಇಲ್ಲದೇ ಇದ್ದರೆ ಅದರ ಕಡೆಗೆ ಅಸಕ್ತ ಇರುವುದಿಲ್ಲವೇ ? ಇದೇನು ಒಂದೇ ಪಕ್ಷದ ಗುತ್ತಿಗೆಯೇ ಎಂದು ಕೇಳಬೇಕಾಗಿದೆ. ಇನ್ನು ನಾನು ಇದರ ಬಗ್ಗೆ ಹೆಚ್ಚು ಮುಂದುವರಿಸುವುದಕ್ಕೆ ಹೋಗುವುದಿಲ್ಲ.

† Indicates that the remarks or speeches have not been revised by the member concerned.